# ನೀಡುವುದರಲ್ಲಿನ ನಿಜಾನಂದ

ಸಂಸ್ಕೃತದ ಮಹಾಕವಿ ಮಾಘ ಕಾವ್ಯ ರಚನೆಯಲ್ಲಿ ಮಗ್ನನಾಗಿದ್ದಾಗ ಬಡ ಬ್ರಾಹ್ಮಣನೊಬ್ಬ ಅವನ ಬಳಿಗೆ ಬಂದು ತನ್ನ ಮಗಳ ಮದುವೆಗಾಗಿ ಹಣ ಸಹಾಯ ಮಾಡಿ ಎಂದು ಅಂಗಲಾಚಿ ಬೇಡಿಕೊಂಡ. ಕವಿ ಸ್ವತಃ ಆರ್ಥಿಕ ಸಂಕಷ್ಟದಲ್ಲಿ ಮುಳುಗಿದ್ದ. ಬಡ ಬ್ರಾಹ್ಮಣನಿಗೆ ದಾನ ಮಾಡಲು ಯೋಗ್ಯ ವಸ್ತು ಯಾವುದಾದರೂ ಇದೆಯೆ ಎಂದು ಮನೆಯ ನಾಲ್ಕೂ ಮೂಲೆಗೆ ದೃಷ್ಟಿ ಹಾಯಿಸಿದನು. ಊಹ್ಞು. ಯಾವುದೂ ಕಾಣಿಸಲಿಲ್ಲ. ಒಂದು ಮೂಲೆಯಲ್ಲಿ ಮುರುಕು ಚಾಪೆಯ ಮೇಲೆ ಮಡದಿ ಮಲಗಿದ್ದಳು. ನಿದ್ದೆಯಲ್ಲಿ, ಮಗ್ಗುಲಿಗೆ ಹೊರಳಿದಾಗ ಅವಳ ಕೈಗಳಲ್ಲಿ ಒಂದೊಂದು ಬಂಗಾರದ ಬಳೆ ಇರುವುದು ಕಾಣಿಸಿತು. ಮದುವೆಯ ಸಮಯದಲ್ಲಿ ಅವಳ ತೌರಿನವರು ಅವಳಿಗೆ ಕೊಟ್ಟಿದ್ದ ಉಡುಗೊರೆಗಳಲ್ಲಿ ಉಳಿದಿದ್ದ ಏಕೈಕ ವಸ್ತು ಅದೊಂದೆ ! ಬಡ ಬ್ರಾಹ್ಮಣನನ್ನು ಬರಿಗೈಲಿ ವಾಪಸ್ಸು ಕಳುಹಿಸಲಿಚ್ಛಿಸದ ಕವಿ ಅನ್ಯಮಾರ್ಗ ಕಾಣದೆ ಮಡದಿಯ ಒಂದು ಕೈಲಿದ್ದ ಬಂಗಾರದ ಬಳೆಯನ್ನು ಸದ್ದಿಲ್ಲದೆ ಕಳಚಿ ಬ್ರಾಹ್ಮಣನಿಗೆ ಕೊಡಲೆಂದು ಬಾಗಿಲ ಬಳಿ ಹೋದನೋ ಇಲ್ಲವೋ, ಮಡದಿಗೆ ಎಚ್ಚರವಾಗಿಬಿಟ್ಟಿತು. ವಸ್ತುಸ್ಥಿತಿಯನ್ನರಿಯಲು ಆಕೆಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ತಕ್ಷಣ ಮೆಲೆದ್ದು ಗಂಡನ ಕೈತಡೆದು ಹೇಳಿದಳು—

'ಸ್ವಾಮಿ, ನಿರ್ಗತಿಕನಾದ ಬ್ರಾಹ್ಮಣನ ಮಗಳ ಮಂಗಳಕಾರ್ಯ ಕೇವಲ ಒಂದು ಬಳೆಯಿಂದ ಪೂರೈಸದು. ತಗೊಳ್ಳಿ. ಸಂತೋಷದಿಂದ ಈ ಬಳೆಯನ್ನೂ ಅವರಿಗೆ ಕೊಟ್ಟುಬಿಡಿ' ಎಂದು ತನ್ನ ಇನ್ನೊಂದು ಕೈಯಲ್ಲಿನ ಬಳೆಯನ್ನೂ ತೆಗೆದು ಕೊಟ್ಟಳು.

ಸತ್ಪಾತ್ರನಿಗೆ ಸಕಾಲದಲ್ಲಿ ಸಹಾಯ-ಹಸ್ತ ನೀಡಿದಾಗ, ಆ ಸಹೃದಯ ಸತಿ-ಪತಿಗಳಿಗಾದ ಸಂತೃಪ್ತಿಗೆ ಸಮಾನವಾದುದುಂಟೆ?

ಈವಂಗೆ ದೇವಂಗೆ ಆವುದಂತರವಯ್ಯಾ
ಜಗದೊಳಗೆ ಈವನೇ ದೇವ ಸರ್ವಜ್ಞ |

ಸಂಗ್ರಹ : ಪಿ.ರಾಮಸ್ವಾಮಿ

